**ಅ. ದಾ. ಸಂ. ಃ 261/ 2018**
**ಪಿ .ಡಬ್ಲ್ಯೂ ಃ 01**

**ದಿನಾಂಕ ಃ 28-10-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಃ- ಪ್ರತಿವಾದಿಯ** ಪರ ಶ್ರೀ.ಜಿ.ಪಿ ವಕೀಲರಿಂದ **ಃ-**

ನನ್ನ ತಂದೆ ಹೆಸರು ಗಂಗಯ್ಯ. ಗಂಗಯ್ಯನವರಿಗೆ ಇಬ್ಬರು ಮಕ್ಕಳು. ನನಗೆ ಒಬ್ಬ ಅಕ್ಕ ಇರುತ್ತಾರೆ. ಅವರು ಮತ್ತು ಅವರ ಗಂಡ ಇಬ್ಬರು ಮೃತಪಟ್ಟಿರುತ್ತಾರೆ. ಅವರಿಗೆ ಮಕ್ಕಳು ಇರುತ್ತಾರೆ. ನನ್ನ ಅಕ್ಕ ವೆಂಕಟ ಲಕ್ಷ್ಮಮ್ಮ ಅವರ ಮಕ್ಕಳ ಹೆಸರು ನನಗೆ ಗೊತ್ತಿರುತ್ತದೆ. ಅವರ ಮಕ್ಕಳು ಲಕ್ಷ್ಮಣ, ಮೂರ್ತಿ ಮತ್ತು ಒಬ್ಬಳು ಹೆಣ್ಣು ಮಗಳು ಇದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ನಮ್ಮ ತಂದೆಗೆ ಮಾರಯ್ಯರವರಿಂದ ನನ್ನ ತಂದೆಗೆ ದಾನಪತ್ರ ಆಗಿರುತ್ತದೆ ಎಂದು ಈ ದಾವೆಯನ್ನು ಹೂಡಿರುತ್ತೇವೆ. ನನ್ನ ಮತ್ತು ವೆಂಕಟಲಕ್ಷ್ಮಮ್ಮನವರ ನಡುವೆ ಯಾವುದೇ ಭಾಗವಾಗಿರಲಿಲ್ಲ ಎಂದರೆ ಸರಿ. ವೆಂಕಟಲಕ್ಷ್ಮಮ್ಮ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವಾಸ್ವತ್ತು ನನ್ನ ತಾಯಿಯವರು ನನಗೆ ಮಾಡಿಕೊಟ್ಟಿರುತ್ತಾರೆ.

ಈ ದಾವಾಸ್ವತ್ತು ಪೌತಿ ಆಧಾರದ ಮೇಲೆ ನನಗೆ ಬಂದಿರುತ್ತದೆ. ಈ ದಾವೆಯನ್ನು ನಾನು ನನ್ನ ಹೆಸರಿಗೆ 1 ಎಕರೆ, ಒಂದು ಗುಂಟೆ ಜಮೀನನ್ನು ಪೋಡಿ ಮಾಡಿಕೊಡಿ ಎಂದು ದಾವೆ ಹೂಡಿರುತ್ತೇನೆ. ಸದರಿ ದಾವಾಸ್ವತ್ತಿನ ಸರ್ವೆ ನಂ. 127/1 ಆಗಿರುತ್ತದೆ. ಅದರ ವಿಸ್ತೀರ್ಣ ಮತ್ತು ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಿಮ್ಮ ಅಕ್ಕ ಮತ್ತು ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಬೇಕಿತ್ತು ಎಂದರೆ, ಸಾಕ್ಷಿಯು ನಮ್ಮ ಅಮ್ಮನವರು ಅವರಿಗೆ ಕೊಡಬೇಕೆಂದು ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.127/1 ರಲ್ಲಿ ಹಲವು ಮನೆಗಳು ಸಹ ಇದೆ ಎಂದರೆ ಸಾಕ್ಷಿಯು ಹಿಂದಕ್ಕೆ ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.127/1 ರಲ್ಲಿ ಎಷ್ಟು ಮನೆಗಳು ಇದೆ ಎಂದರೆ ನನಗೆ

ಗೊತ್ತಿಲ್ಲ. ಸಾಕ್ಷಿಯು ಮುಂದುವೆರದು ಒಂದು ಎಕರೆ ಜಮೀನಿನಲ್ಲಿ ? ಯಾವ ಮನೆಯೂ ಇಲ್ಲ ಎಂದು ನುಡಿಯುತ್ತಾರೆ. ನಾನು ಅಜ್ಜನಹಳ್ಳಿಯಲ್ಲಿ ವಾಸವಿಲ್ಲ ಬೇರೆ ಕಡೆ ವಾಸವಿದ್ದೇನೆ. ಅಜ್ಜನಹಳ್ಳಿಗೆ ನಾನು ಆಗಾಗ ಹೋಗಿ ಬರುತ್ತಿರುತ್ತೇನೆ. ಸರ್ವೆ ನಂ.127/1 ರಲ್ಲಿ ಎಷ್ಟು ಮನೆ ಇದೆ ಎಂದು ನಾನು ಏಣಿಸಿಲ್ಲ. ಸರ್ವೆ ನಂ.127/1 ರ ಪಕ್ಕದಲ್ಲಿ ರಸ್ತೆ ಇದೆ ಎಂದರೆ, ಸಾಕ್ಷಿಯು ಶಾಲೆಯ ಪಕ್ಕದಲ್ಲಿ ಇದೆ ಎಂದು ನುಡಿಯುತ್ತಾರೆ. ಆ ಶಾಲೆ ಸುಮಾರು 25 ವರ್ಷಗಳಿಂದಲೂ ಇದೆ ಎಂದರೆ ಸರಿ. ಆ ಶಾಲೆಯೂ ಸಹ ನಿಮ್ಮ ಸ್ವತ್ತು ಸರ್ವೆ ನಂ.127/1 ರಲ್ಲಿ ಇದೆ ಎಂದರೆ ಸರಿ. ಆ ಶಾಲೆಗೆ ಜಾಗವನ್ನು ನನ್ನ ತಾಯಿಯವರೇ ನೀಡಿರುತ್ತಾರೆ.

ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿದೆ ಸಾಕ್ಷಿ ನೋಡಿ ಅದು ತಿಮ್ಮರಾಯಪ್ಪನವರ ಮಗ ಲಕ್ಷ್ಮಣರವರ ಮನೆ ಎಂದು ಒಪ್ಪಿಕೊಂಡಿದ್ದು, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಇರುವ ಮನೆಯ ಸರ್ವೆ ನಂಬರ್ ಎಷ್ಟು ಎಂದು ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ಕಟ್ಟಿರುವ ಲಕ್ಷ್ಮಣರವರ ಮನೆ ಕಟ್ಟುವುದಕ್ಕೆ ಯಾವುದೇ ದಾಖಲೆ ಇಲ್ಲ, ಗ್ರಾಮ ಠಾಣಾ ಇದ್ದಾಗ ಕಟ್ಟಿಕೊಂಡಿರುತ್ತಾರೆ. ನಿಡಿ-1 ರಲ್ಲಿ ಇರುವ ಜಾಗ ಗ್ರಾಮ ಠಾಣಾ ಆಸ್ತಿ. ನಿಡಿ-1 ರಲ್ಲಿ ಇರುವ ಲಕ್ಷ್ಮಣನವರ ಮನೆ ನಮ್ಮ ಜಾಗದಲ್ಲಿ ಕಟ್ಟಿರುತ್ತಾರೆ. ನಿಡಿ-1 ನ್ನು ನಮ್ಮ ತಾತನವರು ಸುಮಾರು 50 ವರ್ಷಗಳ ಹಿಂದೆ ಲಕ್ಷ್ಮಣರವರಿಗೆ ನೀಡಿರುತ್ತಾರೆ. ಸುಮಾರು 30 ವರ್ಷಗಳ ಹಿಂದೆ ಅವರು ಮನೆ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 3 ರಿಂದ 4 ವರ್ಷಗಳ ಹಿಂದೆ ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಪ್ರತಿವಾದಿ-2 ರವರು ನಮ್ಮ ಊರಿನವರು ಮತ್ತು ಅವರ ನನ್ನ

ಜೊತೆ ಚನ್ನಾಗಿ ಇದ್ದಾರೆ. ಪ್ರತಿವಾದಿ-1 ರವರು ಸಹ ನನ್ನ ಜೊತೆ ಚನ್ನಾಗಿ ಇದ್ದಾರೆ. ಪ್ರತಿವಾದಿ-1 ಮತ್ತು 2 ರವರೇ ನಿಮಗೆ ಹೇಳಿ ಈ ದಾವೆಯನ್ನು ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**